ಕಾರ್ಯನಿರ್ವಹಿಸುತ್ತಿಲ್ಲವೆಂದು ತಿಳಿದು ಬಂದು ಇದರ ಮಾನ್ಯತೆಯನ್ನು ಸರ್ಕಾರವು ರದ್ದು ಪಡಿಸಿದೆ.

ಬೀದರ್‌ನ ಮಾಂಜ್ರಾನದಿ ಲಿಫ್ಟ್ ಇರಿಗೇಷನ್ ಮಾಡುವ ಬಗ್ಗೆ

397 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿರುವ ಮಂಜ್ರ ನದಿಗೆ ಏತ ನೀರಾವರಿ ಮಾಡುವ ವಿಚಾರ ಸರ್ಕಾರದ ಮುಂದಿದೆಯೆ?

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಮಾಡಲಾಗುವುದು.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):

ಅ) ಇದೆ.

ಆ) ಈ ಯೋಜನೆಯನ್ನು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ಕಸಬು ಕಳೆದುಕೊಂಡ ಮೂರ್ತೆದಾರರಿಗೆ ಬೇರೆ ಉದ್ಯೋಗ ಒದಗಿಸುವಿಕೆ

845 -ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸೇಂದಿ ನಿಷೇಧದಿಂದ ಎಷ್ಟು ಜನ ಮೂರ್ತೆದಾರರು ಉದ್ಯೋಗ ಕಳೆದುಕೊಂಡಿರುವರು?

ಆ) ಸರಕಾರವು ಈ ಮೂರ್ತೆದಾರರನ್ನು ಬೀದಿಪಾಲು ಮಾಡುವುದಿಲ್ಲವೆಂದು ಆಶ್ವಾಸನೆಯಿತ್ತಂತೆ ಯಾವ ಉದ್ಯೋಗದ ಅವಕಾಶ ಕಲ್ಪಿಸಿದೆ?

ಇ) ಉದ್ಯೋಗ ಕಳೆದುಕೊಂಡವರ ಬಗ್ಗೆ ಸರಕಾರ ಈ ತನಕ ಮಾಡಿದ ಖರ್ಚು ಎಷ್ಟು?

ಈ) ಈ ಜನರ ತೊಂದರೆ ನಿವಾರಿಸುವಲ್ಲಿ ಸರಕಾರದ ಯಾವ ಕಾರ್ಯಕ್ರಮಗಳನ್ನು ರೂಪಿಸಿದೆ.

ಉ) ಈ ಜನರ ತೊಂದರೆ ನಿವಾರಿಸುವಂತೆ ಕರ್ನಾಟಕ ಪ್ರದೇಶ ಆರ್ಯ ಈಡಿಗ ಸಂಘದವರಿಂದ ಬಂದಿರುವ ಮನವಿಯನ್ನು ಸರಕಾರ ಪರಿಶೀಲಿಸಿದೆಯೇ?

ಶ್ರೀ ಕೆ. ಶಿವಮೂರ್ತಿ (ಅಬಕಾರಿ ರಾಜ್ಯ ಸಚಿವರು)

ಅ) ಸುಮಾರು 10 468.

ಆ) ಮೂರ್ತೆದಾರರ ಸಹಕಾರ ಸಂಘಗಳನ್ನು ಸ್ಥಾಪಿಸಿ ಆ ಮೂಲಕ ನಿಗದಿತ ಉದ್ದೇಶಕ್ಕಾಗಿ ಶೇಂದಿ ಮಾರಾಟ ಕುರಿತು ನಿಯಮಗಳನ್ನು ರೂಪಿಸುವ ಬಗ್ಗೆ ಸರ್ಕಾರವು ತೀವ್ರ ರೀತಿಯಲ್ಲಿ ಪರಿಶೀಲಿಸುತ್ತಿದೆ.

ಇ) ಇಲ್ಲ.

ಈ) ಉಪ ಪ್ರಶ್ನೆ (ಅ)ನಲ್ಲಿ ತಿಳಿಸಿರುವಂತೆ.

ಉ) ಹೌದು.